# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1077 |
| ಸದಸ್ಯರ ಹೆಸರು | ಶ್ರೀ ವೈ ಎಂ ಸತೀಶ್ |
| ಉತ್ತರಿಸುವ ದಿನಾಂಕ | 28-12-2022 |
| ಉತ್ತರಿಸುವವರು | ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಾಶಿಯಲ್ಲಿರುವ ಕರ್ನಾಟಕ ಛತ್ರ/ ಮೈಸೂರು ಛತ್ರದ ಒಟ್ಟು ವಿಸ್ತೀರ್ಣವೆಷ್ಟು: ಇದು ಯಾರ ಒಡೆತನದಲ್ಲಿದೆ: ಇದನ್ನು ಯಾವಾಗ ನಿರ್ಮಿಸಲಾಗಿದೆ: ಇಲ್ಲಿಗೆ ಕಳೆದ ಐದು ವರ್ಷಗಳಲ್ಲಿ ನೀಡಿರುವ ಅನುದಾನ ಎಷ್ಟು: ಇದನ್ನು ನವೀಕರಣ ಮಾಡಲಾಗಿದೆಯೇ: ಇಲ್ಲವಾದಲ್ಲಿ ನವೀಕರಣ ಮಾಡಲು ಸರ್ಕಾರದ ಕ್ರಮಗಳೇನು: (ವಿವರ ನೀಡುವುದು) | • ಉತ್ತರಪ್ರದೇಶದ ವಾರಣಾಸಿ/ಕಾಶಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಒಟ್ಟು ವಿಸ್ತೀರ್ಣ:16969.304 ಚ.ಅಡಿಗಳು<br>• ಇದು ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ಒಡೆತನ/ ಆಡಳಿತದಲ್ಲಿರುತ್ತದೆ.<br>• ಕರ್ನಾಟಕ ರಾಜ್ಯ ಛತ್ರವು ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ರವರಿಂದ 1928 ರಲ್ಲಿ ನಿರ್ಮಿಸಲ್ಪಟ್ಟಿರುತ್ತದೆ.<br>• ಕಳೆದ 5 ವರ್ಷಗಳಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.<br>• ಆದರೆ 5 ವರ್ಷಗಳ ಹಿಂದೆ ಅಂದರೆ 2015-16ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ಕಂಇ 70 ಮುಅಬಿ 2015, ದಿನಾಂಕ:11.06.2015 ರಲ್ಲಿ ಬಿಡುಗಡೆ ಮಾಡಲಾದ ರೂ.150.00 ಲಕ್ಷಗಳ ಅನುದಾನದಲ್ಲಿ ನವೀಕರಿಸಲಾಗಿದೆ. |
| (ಆ) | ಕಾಶಿಯಲ್ಲಿರುವ ಕರ್ನಾಟಕ ಛತ್ರ/ಮೈಸೂರು ಛತ್ರದಲ್ಲಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ ಎಷ್ಟು: (ಹುದ್ದೆವಾರು ವೇತನ ವಿವರಗಳೊಂದಿಗೆ ವಿವರ ನೀಡುವುದು) | ಸಿಬ್ಬಂದಿಗಳ ವಿವರಗಳು ಈ ಕೆಳಕಂಡಂತಿದೆ. (ರೂ.ಗಳಲ್ಲಿ) (see table below) |

(ರೂ.ಗಳಲ್ಲಿ)

| ಕ್ರ. ಸಂ. | ಹುದ್ದೆ | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ |
|---|---|---|---|
| 1. | **ವ್ಯವಸ್ಥಾಪಕರು** (ಮಾಸಿಕ ಸಂಭಾವನೆ ನೆಲೆಯಲ್ಲಿ ತಾತ್ಕಾಲಿಕವಾಗಿ 11 ತಿಂಗಳ ಅವಧಿಗೆ ನೇಮಿಸಿಕೊಳ್ಳಲಾಗಿದೆ) | 1 | 25,000.00 |
| 2. | ಸಹಾಯಕ | 1 | 11,703.00 |
| 3. | ಅರ್ಚಕ | 1 | 2,500.00 |
| 4. | ಸ್ವೀಪರ್ | 1 | 3,500.00 |
| 5. | ಸ್ಕ್ಯಾವೆಂಜರ್ | 1 | 3,000.00 |

......2

| | | |
|---|---|---|
| ಇ) | ಕಾಶಿಗೆ ತೆರಳುವ ರಾಜ್ಯದ ಯಾತ್ರಾರ್ಥಿಗಳಿಗೆ ಇಲ್ಲಿ ಇಲಾಖೆ ವತಿಯಿಂದ ನೀಡಲಾಗುವ ಸೌಲಭ್ಯಗಳೇನು; ಇದನ್ನು ರಾಜ್ಯದ ಯತ್ರಾರ್ಥಿಗಳಿಗೆ ಪ್ರಚಾರ ಪಡಿಸಲು ಇಲಾಖೆಯು ಕೈಗೊಂಡ ನಿರ್ಧಾರಗಳೇನು? (ವಿವರ ನೀಡುವುದು) | ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದಲ್ಲಿ ಒಟ್ಟು 18 ಕೊಠಡಿಗಳಿದ್ದು, ಕಾಶಿಗೆ ತೆರಳುವ ರಾಜ್ಯದ ಯಾತ್ರಾರ್ಥಿಗಳ ಕೋರಿಕೆ ಮೇರೆಗೆ ಕೊಠಡಿಗಳ ಲಭ್ಯತೆಯನುಸಾರ ಮೂಲಭೂತ ಸೌಲಭ್ಯಗಳನ್ನೊಳಗೊಂಡ ವಸತಿ ವ್ಯವಸ್ಥೆಯನ್ನು ಒದಗಿಸಲಾಗುತ್ತಿದೆ.<br><br>2022-23ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಪ್ರಸಕ್ತ ಸಾಲಿನಿಂದ ಜಾರಿಗೆ ಬರುವಂತೆ, ಕರ್ನಾಟಕ ರಾಜ್ಯದಿಂದ ಕಾಶಿಗೆ ತೆರಳುವ ಒಟ್ಟು 30,000 ಯಾತ್ರಾರ್ಥಿಗಳಿಗೆ ತಲಾ ರೂ.5,000/- ಗಳಂತೆ ಸಹಾಯಧನವನ್ನು ನೀಡಲಾಗುತ್ತಿದೆ.<br><br>ಕಾಶಿ ಯಾತ್ರಾರ್ಥಿಗಳಿಗೆ ಸರ್ಕಾರದ ಸಹಾಯಧನ ಮತ್ತು ಕರ್ನಾಟಕ ಭಾರತ್ ಗೌರವ್ ಕಾಶಿ ದರ್ಶನ ಯೋಜನೆಗಳ ಪ್ರಚಾರದ ಬಗ್ಗೆ ರಾಜ್ಯದ **ಪ್ರಮುಖ ದಿನಪತ್ರಿಕೆಗಳಲ್ಲಿ** ವ್ಯಾಪಕ ಪ್ರಚಾರವನ್ನು ನೀಡಲಾಗಿರುತ್ತದೆ. ಇದಲ್ಲದೆ, ಸಾರ್ವಜನಿಕರಿಗೆ ಸುಲಭವಾಗಿ ಮಾಹಿತಿಯನ್ನು ನೀಡುವ ಕುರಿತು Social Media (Facebook, Twitter, Youtube, Google) ಮೂಲಕ ಪ್ರಚಾರ ಮಾಡಲಾಗಿರುತ್ತದೆ. |

ಸಂಖ್ಯೆ: ಕಂಇ 247 ಮುಸಪ್ರ 2022

**(ಶಶಿಕಲಾ. ಅ. ಜೊಲ್ಲೆ)**
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು